
## ಹೇಗೆ ಹೋದೀತು?

ಶತ್ರುಗಳು ಕಾಣಿಸಿದರೆ ಸಾಕು ಗುಂಡು ಹಾರಿಸಲು ಸನ್ನದ್ಧನಾಗಿ ಕಾವಲು ಕಾಯುತ್ತಿದ್ದ ಗುಂಡ ಮೈತುಂಬಾ ಸೊಳ್ಳೆ ಪರದೆ ಹೊದ್ದುಕೊಂಡಿದ್ದ. ಇದನ್ನು ಗಮನಿಸಿದ ಇನ್ನೊಬ್ಬ ಸೈನಿಕ ನಗುತ್ತ, 'ಎಲ್ಲಾ ಬಿಟ್ಟು ಈ ಸೊಳ್ಳೆ ಪರದೆಯನ್ನು ಯಾಕೆ ಹೊದ್ದು ಕೊಂಡಿದ್ದೀಯಾ? ಶತ್ರುಗಳ ಗುಂಡು ತಾಗಿದರೆ ನೀನು ಕ್ಷಣವೂ ಜೀವಂತವಾಗಿರುವುದಿಲ್ಲ, ಸಾಯುತ್ತೀಯಾ' ಎಂದ. ಅದಕ್ಕೆ ಗುಂಡ 'ಮೂರ್ಖನಂತೆ ಮಾತನಾಡಬೇಡ! ಸೊಳ್ಳೆಯೇ ಒಳಗೆ ಹೋಗದಿದ್ದ ಮೇಲೆ ಇನ್ನು ಗುಂಡು ಹೇಗೆ ಒಳಗೆ ನುಗ್ಗಲು ಸಾಧ್ಯ?' ಎಂದು ಪ್ರಶ್ನಿಸಿದಾಗ ಆ ಸೈನಿಕನಿಗೆ ಮಾತೇ ಹೊರಡಲಿಲ್ಲ.



**ಇಂದಿರಾಸುತ**

## ಬೇಗ ಕರ್ಕೊಂಡ್ ಬಾ



ಒಂದು ದಿನ ರಾತ್ರಿ ಕಳ್ಳನೊಬ್ಬ ಮನೆಗೆ ಬಂದ. ಗಂಡಹೆಂಡತಿ ಇಬ್ಬರೂ ಸೇರಿ ಕಳ್ಳನನ್ನು ಹಿಡಿದರು. ಹೆಂಡತಿ ತುಂಬಾ ದಪ್ಪ ಇದ್ದಳು. ಸುಮಾರು 100 ಕೆ.ಜಿ.ಗೂ ಹೆಚ್ಚು ತೂಕವಿದ್ದಳು. ಆಕೆ ಕಳ್ಳನ ಭುಜದ ಮೇಲೆ ಹತ್ತಿ ಕುಳಿತು ಗಂಡನಿಗೆ ಹೇಳಿದಳು: 'ರೀ ಬೇಗ ಪೊಲೀಸ್ ಸ್ಟೇಷನ್‌ಗೆ ಹೋಗಿ ಪೊಲೀಸರನ್ನು ಕರೆದುಕೊಂಡು ಬನ್ನಿ.' ಗಂಡ ಹೊರಗೆ ಬಂದು 'ನನಗೆ ನನ್ನ ಚಪ್ಪಲಿ ಸಿಗ್ತಿಲ್ವೆ' ಎಂದ. ಮೇಲೆ ಕೂತ ಮಹಿಳೆಯ ತೂಕ ತಾಳಲಾರದೆ ಕಳ್ಳ ಹೇಳಿದ: 'ನಿನ್ ಚಪ್ಪಲಿ ಸಿಗದಿದ್ರೆ ನನ್ ಚಪ್ಲಿ ಹಾಕ್ಕೊಂಡು ಹೋಗು, ಒಟ್ನಲ್ಲಿ ಬೇಗ ಕರ್ಕೊಂಡು ಬಾ!'

**ವಿ. ಹೇಮಂತಕುಮಾರ್**